ಮರಿ ಕಳ್ಳರೊಡನೆ ವಾಪಸಾದ.

ಒಂದೆರಡು ದಿನ ಕಳೆಯಿತು. ಹೇಗಾದರೂ ಸರಿ ಒಡವೆಗೆ ಕನ್ನ ಹಾಕಲೇಬೇಕೆಂದು ಕಳ್ಳರೊಡೆಯ ನಿಶ್ಚಯಿಸಿ, ಹಿಂದಿನಂತೆ ರಾತ್ರಿ ಬಾಗಿಲ ಹಿಂದೆ ಇತರರೊಡನೆ ಅಡಗಿಕೊಂಡ.

ರಂಗಮ್ಮನಿಗೆ ಕಳ್ಳರ ಸಮಾಚಾರ ತಿಳಿಯಿತು. ಮತ್ತೆ ಮಂಚದಲ್ಲಿ ಗಂಡನಿಗೆ ಎಲೆ–ಅಡಕೆ ಸುತ್ತಿ ಕೊಡುತ್ತ ಹೇಳಿದಳು.'ರೀ, ನಮ್ಮ ಮನೆಯ ಒಡವೆ ಜಮೀನಿನ ಬಾವಿಯಲ್ಲಿದೆ ಎಂದೆನಲ್ಲ. ಒಡವೆಗಳೆಲ್ಲ ಬಾವಿಯಲ್ಲಿಲ್ಲ.. ಯಾರಿಗೂ ಹೇಳಬೇಡಿ... ನಮ್ಮ ಮನೆಯ ಹಿಂದಿನ ಪಡಸಾಲೆಯ ಹಿಂದಿನ ಭತ್ತದ ಕೋಣೆಯಲ್ಲಿದೆ. ಭತ್ತದ ಚೀಲಗಳಲ್ಲಿ ನಮ್ಮ ಮನೆಯ ಚಿನ್ನಾಭರಣಗಳನ್ನೆಲ್ಲ ಹುದುಗಿಸಿಟ್ಟಿದ್ದೇನೆ'

'ಎಲಾ ಇವಳ? ಮನೆಯಲ್ಲೇ ಒಡವೆಗಳನ್ನೆಲ್ಲ ಇಟ್ಟುಕೊಂಡು, ನಮ್ಮನ್ನು ಯಾಮಾರಿಸುತ್ತಿದ್ದಾಳಲ್ಲ ಇವಳು? ಸರಿಯಾದ ಬುದ್ಧಿ ಕಲಿಸುತ್ತೇನೆ' ಎಂದು ಕಳ್ಳರೊಡೆಯ ಆಲೋಚಿಸಿದ. ಅಂದು ಗುಂಡಣ್ಣ ಮತ್ತು ರಂಗಮ್ಮ ಮಲಗಿದ ಮೇಲೆ, ಕಳ್ಳರೊಡೆಯ ತನ್ನ ಪಟಾಲಂನೊಂದಿಗೆ ಬಂದ. ಪಡಸಾಲೆಯ ಹಿಂದಿನ ಕೋಣೆಯ ಕಿಟಕಿ ಬಾಗಿಲನ್ನು ಹಾರೆಯಿಂದ ಮೀಟಿ ತೆಗೆದರು. ಎಂಟು ಹತ್ತು ಭತ್ತದ ಚೀಲಗಳನ್ನು ಅಲ್ಲಿ ಪೇರಿಸಲಾಗಿತ್ತು. ಕಳ್ಳನ ಸಹಚರರು ಭತ್ತದ ಚೀಲಗಳನ್ನೆಲ್ಲ ಬೆನ್ನ ಮೇಲೆ ಹೊತ್ತು ಹೊರಗೆ ಸಾಗಿಸಿದರು. ಗುಂಡಣ್ಣನ ಜಮೀನಿನ ಬಳಿಗೇ ಬಂದರು. ಕಳ್ಳರೊಡೆಯ ಒಂದೊಂದು ಮೂಟೆಯನ್ನೂ ತೆರೆದು ಒಡವೆಗಳಿಗಾಗಿ ಪರೀಕ್ಷಿಸಿರೆಂದು ಆಜ್ಞೆ ಮಾಡಿದ. ಕಳ್ಳರೆಲ್ಲ ಭತ್ತದ ಮೂಟೆಗಳನ್ನೆಲ್ಲ ಹರಿದು, ಭತ್ತವನ್ನೆಲ್ಲ ಜಮೀನಿನ ತುಂಬ ಚೆಲ್ಲಾಡಿದರು. ಬೆಳಗಾಗುತ್ತ ಬಂದಿತು. ಒಡವೆ ಮಾತ್ರ ಸಿಗಲಿಲ್ಲ.

ಕಳ್ಳರೊಡೆಯ ಒಡವೆಗಳನ್ನು ಪತ್ತೆ ಮಾಡಲೇಬೇಕೆಂದು ನಿಶ್ಚಯಿಸಿ, ಇನ್ನೊಂದು ದಿನ ರಾತ್ರಿ ಹಿಂದಿನಂತೆ ಬಾಗಿಲ ಹಿಂದೆ ತನ್ನ ಪುಡಿ ಕಳ್ಳರೊಂದಿಗೆ ಅವಿತುಕೊಂಡ. ಈ ಬಾರಿ ರಂಗಮ್ಮ ಗಂಡನಿಗೆ ಎಂದಿನಂತೆ ಎಲೆ ಅಡಿಕೆ ಸುತ್ತಿಕೊಡುತ್ತ ಹೇಳಿದಳು.

'ರೀ, ಸರಿಯಾಗಿ ಕೇಳಿಸಿಕೊಳ್ಳಿ, ನನಗೆ ಇತ್ತೀಚೆಗೆ ಮರೆವು ಹೆಚ್ಚಾಗಿದೆ. ಒಡವೆಗಳು ಭತ್ತದ ಚೀಲಗಳಲ್ಲಿ ಇಲ್ಲ. ಯಾರಿಗೂ ಹೇಳಬೇಡಿ. ತಿಜೋರಿಯಲ್ಲಿಟ್ಟರೆ ಕಳ್ಳರಿಗೆ ಕದಿಯಲು ಸುಲಭ ಅಂತ ಹೇಳಿ, ನಮ್ಮ ಅಡುಗೆ ಮನೆಯಲ್ಲೇ ಹಳೆ ಪಾತ್ರೆಗಳಲ್ಲಿ ಅಡಗಿಸಿಟ್ಟಿದ್ದೇನೆ. ಯಾರಿಗೂ ಹೇಳಬೇಡಿ, ಗೊತ್ತಾಯ್ತ?'

ಕಳ್ಳರೊಡೆಯ ಚುರುಕು ಕಣ್ಣುಗಳಿಂದ ಮೀಸೆಯ ಮೇಲೆ ಕೈ ಮಾಡಿದ. ಅಡುಗೆ ಮನೆಯಲ್ಲೇ ಒಡವೆಗಳನ್ನೆಲ್ಲ ಇಟ್ಟುಕೊಂಡು, ಸತಾಯಿಸುತ್ತಿದ್ದಾಳಲ್ಲ....ಈ ಬಾರಿ ಖಂಡಿತ ಒಡವೆಗಳು ನಮ್ಮ ಪಾಲಾಗುತ್ತವೆ ಎಂದುಕೊಂಡ.

ಮಧ್ಯರಾತ್ರಿ ಏನೋ ಸಪ್ಪಳ! ರಂಗಮ್ಮನಿಗೆ ಎಚ್ಚರವಾಯಿತು. ಗುಂಡಣ್ಣ ಗೊರಕೆ ಹೊಡೆಯುತ್ತಿದ್ದ. ರಂಗಮ್ಮ ಮೆಲ್ಲನೆದ್ದಳು. ಅವಳ ನಿರೀಕ್ಷೆ ನಿಜವಾಗಿತ್ತು!

ಕಳ್ಳರೊಡೆಯ ಹಾರೆ, ಪಿಕಾಸಿಗಳೊಂದಿಗೆ ಮನೆಗೆ ಕನ್ನ ಹಾಕಲು ತಯಾರಾಗಿ ಬಂದಿದ್ದ. ಹೆಚ್ಚು ಸದ್ದು ಮಾಡದಂತೆ ಅಡುಗೆ ಮನೆಯ ಕಿಟಕಿಯ ಬಾಗಿಲನ್ನು ಉಪಾಯವಾಗಿ ಸಡಿಲಿಸಲಾಯಿತು. ಒಬ್ಬರು ತೂರುವಷ್ಟು ಅವಕಾಶವಾಯಿತು.

ಕಳ್ಳರೊಡೆಯ ಒಬ್ಬನನ್ನು ಕಿಟಕಿಯಿಂದ ಅಡುಗೆ ಮನೆಗೆ ಹೋಗುವಂತೆ ತಿಳಿಸಿದ. ಆತ ಮೊದಲು ತನ್ನ ಮುಖವನ್ನು ಕಿಟಕಿಯ ಮೂಲಕ ತೂರಿಸಿದ.

ಸಿದ್ಧಳಾಗಿದ್ದ ರಂಗಮ್ಮ ಕಳ್ಳನ ಮೂಗನ್ನು ಅಡುಗೆ ಮನೆಯ ಚಾಕುವಿನಿಂದ ಕತ್ತರಿಸಿ, ಖಾರದ ಪುಡಿ, ಉಪ್ಪಿನ ಪುಡಿ ಎರಚಿದಳು. ಜೋರಾಗಿ ನರಳುತ್ತ, ಕಳ್ಳ ಹಿಂದೆ ಸರಿದ. ಕೂಗಿಕೊಳ್ಳುವಂತಿರಲಿಲ್ಲ. ಮುಂದಿನಾತ ಹಾಗೇ ಕಿಟಕಿಯಲ್ಲಿ ಮುಖ ತೂರಿಸಿದ. ಅವನಿಗೂ ಅದೇ ಗತಿಯಾಯಿತು. ಯಜಮಾನ ಕೂಡ ಮುಂದೆ ಬಂದು, ಕಿಟಕಿಯಲ್ಲಿ ಮುಖ ತೂರಿಸಿದ. ಅವನ ಮೂಗು ಒಂದೇ ಹೊಡೆತಕ್ಕೆ ನೆಲದ ಮೇಲೆ ಬಿತ್ತು. ಇಪ್ಪತ್ತು ಮಂದಿಗೂ ತಕ್ಕ ಶಾಸ್ತಿಯಾಯಿತು. ಮೂಗು ಕಳೆದುಕೊಂಡ ಒಬ್ಬೊಬ್ಬರೂ ಬೊಬ್ಬೆಯಿಡುತ್ತ ಕತ್ತಲಲ್ಲಿ ಮರೆಯಾದರು.

ಬೆಳಿಗ್ಗೆ ಗುಂಡ ಬೇಗ ಎದ್ದ. ಮುಂದಿನ ಬಾಗಿಲನ್ನು ತೆಗೆಯುತ್ತಲೇ ಅವನಿಗೊಂದು ಆಶ್ಚರ್ಯ ಕಾದಿತ್ತು. ಅಲ್ಲೊಂದು ಮೂಗಿನ ತೋರಣ! ಗಾಬರಿಗೊಂಡ ಗುಂಡ. ಹೆಂಡತಿ ಕತೆಯನ್ನೆಲ್ಲ ವಿವರಿಸಿದಳು. ಅಷ್ಟೆ ಅಲ್ಲ ಗಂಡನನ್ನು ತಮ್ಮ ಜಮೀನಿಗೆ ಕರೆದುಕೊಂಡು ಹೋದಳು. ಜಮೀನನ್ನೆಲ್ಲ ಅಗೆದಾಗಿತ್ತು! ಜಮೀನಿನ ತುಂಬೆಲ್ಲ ನೀರು. ಅಲ್ಲೇ ಭತ್ತವನ್ನೂ ಎರಚಲಾಗಿತ್ತು!

ಮೂರ್ನಾಲ್ಕು ತಿಂಗಳ ನಂತರ ಜಮೀನಿನಲ್ಲಿ ಭರ್ಜರಿ ಬೆಳೆ ಕಾಣಿಸಿತು. ಗುಂಡಣ್ಣ ಕೂಡ ಬದಲಾಗಿದ್ದ.

'ಮತ್ತೆ ನಮ್ಮ ಆಭರಣ?' ಎಂದು ಪೆದ್ದು ಪೆದ್ದಾಗಿ ಬಾಯಿಬಿಟ್ಟ ಗುಂಡಣ್ಣ.

'ಚಿನ್ನವನ್ನೇ ಬೆಳೆದಿದ್ದೇವೆ. ಆ ಒಡವೆಯ ಗೊಡವೆ ಏಕೆ?' ಎಂದಳು ರಂಗಮ್ಮ.

**-ಮತ್ತೂರು ಸುಬ್ಬಣ್ಣ**

# ಚಿಟ್ಟೆ ಹೋಳಿ

**ಅ**ಪ್ಪ ಚಿಟ್ಟೆ ಯಾಕೆ ಹೋಳಿ ಆಡಿತು
ಬಣ್ಣವೆಲ್ಲಾ ಮೆತ್ತಿಕೊಂಡು ಚಂದವಾಯಿತು
ಮುಖವು ಕಪ್ಪು ದೇಹ ಕೆಂಪು
ರೆಕ್ಕೆಯು ನೀಲಿ ಹಸಿರು ಹಳದಿಯು

ಹಿಡಿಯ ಹೊರಟೆ ನಾನು ಕೈ ಎಲ್ಲಾ ಬಣ್ಣವು
ಹಾರಿತು ಯಾಕೆ ಮೇಲೆ ಕೆಳಗೆ ಅದಕೆ ಯಾಕೆ ಭಯವು
ಬಣ್ಣ ಬಣ್ಣದ ಚಿಟ್ಟೆ ನೋಡಲು ಎಷ್ಟು ಚಂದವು
ಹಾರಿ ಬಂದು ಕೈ ಮೇಲೆ ಕುಳಿತರೆ ಎಷ್ಟು ಅಂದವು

ಚಿಟ್ಟೆಗೆ ಯಾಕೆ ಅಷ್ಟು ಬಣ್ಣ ನನಗೆ ಒಂದೇ ಬಣ್ಣವು
ನಾನು ಚಿಟ್ಟೆಯಾಗಿ ಕುಣಿವೆ ಹೋಳಿ ದಿನವು
ಅಣ್ಣ ತರುವ ಹಚ್ಚಿ ಬಿಡುವ ಮೂರು ಮೂರು ಬಣ್ಣವು
ಆ ದಿನ ನನ್ನ ಮೈ ಎಲ್ಲಾ ಬಣ್ಣ ಬಣ್ಣವು

ನನಗೆ ನೀಲಿ ಅಣ್ಣಗೆ ಹಸಿರು ಅಕ್ಕಗೆ ಗುಲಾಬಿಯು
ಬಣ್ಣ ಹಚ್ಚಿ ಕುಣಿಯುತ್ತಿದ್ದರೆ ನಾವೇ ಚಿಟ್ಟೆಯು
ಬಣ್ಣ ಆಡಿ ಮತ್ತೆ ಬಂತು ಚಿಟ್ಟೆಯು
ಅದರಂತೆ ಈಗ ನನ್ನ ಮೈ ಬಣ್ಣ ಬಣ್ಣವು

**-ವಿಶ್ವಮೂರ್ತಿ ಹವಲ್ದಾರ್**

